ಸ್ಥಾಪನೆ ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

## ಅಖಿಲ ಕರ್ನಾಟಕ ಮಕ್ಕಳ ಕೂಟ (ರಿ.) ಬೆಂಗಳೂರು

ಇವರ ಸಂಯುಕ್ತಾಶ್ರಯದಲ್ಲಿ

## ಡಾ|| ಹೆಚ್. ವಿಶ್ವನಾಥ ಮತ್ತು ಶ್ರೀಮತಿ ಎಂ.ಎಸ್. ಇಂದಿರಾ

# ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ

**ಶನಿವಾರ; ೧೯-೨-೨೦೨೨** **ಸಂಜೆ: ೫-೩೦ಕ್ಕೆ**

ಸ್ಥಳ : **ಕುವೆಂಪು ಸಭಾಂಗಣ**

ಮೂರನೆಯ ಮಹಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

---

**ಉದ್ಘಾಟನೆ** : **ಶ್ರೀ ಹರಿಪ್ರಕಾಶ್ ಕೋಣೆಮನೆ**
ಮುಖ್ಯ ಸಂಪಾದಕರು ವಿಸ್ತಾರ ನ್ಯೂಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ವಿಸ್ತಾರ ಮೀಡಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

**ಅಧ್ಯಕ್ಷತೆ** : **ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

**ಪ್ರಶಸ್ತಿ ಪ್ರದಾನ** : **ಶ್ರೀಮತಿ ಲತಾಕುಮಾರಿ** ಭಾಆಸೇ
ನಿರ್ದೇಶಕರು, ರಾಜ್ಯ ಅಂಗವಿಕಲರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು

**ಪ್ರಶಸ್ತಿ ಪುರಸ್ಕೃತರು** : **ಶ್ರೀ ರಮೇಶ್ ಮುದಿಗೆರೆ** ಸಾಹಿತಿಗಳು

**ಮುಖ್ಯ ಅತಿಥಿಗಳು** : **ಶ್ರೀ ಕೆ. ಮೋಹನ್‌ದೇವ್ ಆಳ್ವ**
ಅಧ್ಯಕ್ಷರು, ಅಖಿಲ ಕರ್ನಾಟಕ ಮಕ್ಕಳ ಕೂಟ (ರಿ.), ಬೆಂಗಳೂರು

**ಶ್ರೀ ಟಿ.ವಿ. ಶ್ರೀನಿವಾಸನ್**
ಸಂಸ್ಥಾಪಕರು, ರಮಣ ಮಹ ಋಷಿ ಅಂಧರ ಅಕಾಡೆಮಿ, ಬೆಂಗಳೂರು

**ಉಪಸ್ಥಿತಿ** : **ಡಾ|| ಹೆಚ್. ವಿಶ್ವನಾಥ** ದತ್ತಿ ದಾನಿಗಳು

**ಸರ್ವರಿಗೂ ಆದರದ ಸ್ವಾಗತ**

**ನೇ.ಭ. ರಾಮಲಿಂಗಶೆಟ್ಟಿ**
ಗೌರವ ಕಾರ್ಯದರ್ಶಿ

**ಬಿ.ಎಂ. ಪಟೇಲ್‌ಪಾಂಡು**
ಗೌರವ ಕೋಶಾಧ್ಯಕ್ಷರು

# ಡಾ|| ಹೆಚ್. ವಿಶ್ವನಾಥ ಮತ್ತು ಶ್ರೀಮತಿ ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ





ದತ್ತಿದಾನಿಗಳಾದ ಡಾ. ಎಚ್. ವಿಶ್ವನಾಥ ಅವರದ್ದು ಕನ್ನಡ ಭಾಷಾಭಿಮಾನ, ಕನ್ನಡೇತರರನ್ನು ಕನ್ನಡದಲ್ಲಿ ಮಾತನಾಡುವಂತೆ ಮನವಿಮಾಡುವುದು ಮತ್ತು ಉತ್ತೇಜಿಸುವುದು ಇವರ ಭಾಷಾಭಿಮಾನಕ್ಕೆ ನಿದರ್ಶನ. ಅರವತ್ತರ ದಶಕದಲ್ಲಿ ವಿದ್ಯಾರ್ಥಿ ಆಗಿದ್ದಾಗಲೇ ಅ.ನ.ಕೃ., ಮ. ರಾಮಮೂರ್ತಿ ಹಾಗೂ ನಾಡಿಗೇರ ಕೃಷ್ಣರಾಯ ಅವರುಗಳೊಂದಿಗೆ ಕನ್ನಡ ಚಳವಳಿಗಳಲ್ಲಿ ಭಾಗಿಯಾಗಿದ್ದರು. ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ, ಕಾಲೇಜು ಪರಿಸರದಲ್ಲಿ ಕನ್ನಡದಲ್ಲಿ ಮಾತನಾಡುವುದೇ ಕೀಳರಿಮೆ ಎಂಬ ಭಾವನೆ ಇದ್ದ ಕಾಲದಲ್ಲಿ ಸಹಪಾಠಿಗಳೊಂದಿಗೆ ಸೇರಿ ಕನ್ನಡ ಸಂಘವನ್ನು ಸ್ಥಾಪಿಸಿದರು.

ಮೈಸೂರು ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳಿಂದ ರಚಿತವಾದ ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇಂಗ್ಲೆಂಡಿನಲ್ಲಿ ಕನ್ನಡ ಬಳಗದ ಸ್ಥಾಪನೆಯಲ್ಲಿ ಭಾಗಿಯಾಗಿದ್ದರು. ಇದೀಗ ಕರ್ನಾಟಕದಲ್ಲಿ ವಿಶೇಷ ದೃಷ್ಟಿ ಚೇತನ ಲೇಖಕರಿಗೆ ಪ್ರಥಮ ಬಾರಿಗೆ ಪ್ರಶಸ್ತಿ ನೀಡಲು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿರುವ ರೂ. ೨,೫೦,೦೦೦/-ಗಳ ದತ್ತಿಯಿಂದ ಪ್ರತಿವರ್ಷ ಅಂತಹ ಒಬ್ಬ ಸಾಹಿತಿಗೆ ಪ್ರಶಸ್ತಿಯನ್ನು ನೀಡಲು ತೀರ್ಮಾನಿಸಿದ್ದಾರೆ. ಈ ಪ್ರಶಸ್ತಿಯ ಮೊತ್ತ ರೂ. ೧೦,೦೦೦/- ಗಳಾಗಿರುತ್ತದೆ.

## ಶ್ರೀ ರಮೇಶ್ ಮುದಿಗೆರೆ ದತ್ತಿ ಪ್ರಶಸ್ತಿ ಪುರಸ್ಕೃತರು



ಶ್ರೀ ಮುದಿಗೆರೆ ರಮೇಶ್‌ಕುಮಾರ್ ದಿನಾಂಕ ೪-೩-೧೯೭೨ರಂದು ಮುದಿಗೆರೆ ಗ್ರಾಮ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿ ಜನಿಸಿದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಪದವೀಧರರಾಗಿದ್ದು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಇವರು ಒಟ್ಟು ಆರು ಕೃತಿಗಳನ್ನು ರಚಿಸಿದ್ದಾರೆ. ಮೂರು ಸ್ವತಂತ್ರ ಕೃತಿಗಳು ಹಾಗೂ ಮೂರು ಸಂಪಾದಿತ ಕೃತಿಗಳಾಗಿರುತ್ತವೆ. ಸ್ವತಂತ್ರ ಕೃತಿಗಳು : ೧. ಸೂರ್ಯನ ರಾತ್ರಿಗಳು (ಕವನ ಸಂಕಲನ : ೧೯೯೨) ೨. ಎದೆಯ ಪುಟಗಳು (ಕವನ ಸಂಕಲನ : ೧೯೯೮) ೩. ಬಟಾಬಯಲು (ಕವನ ಸಂಕಲನ : ೨೦೨೧) ಪ್ರಕಟಗೊಂಡಿವೆ. ಇವರು ೨೦೧೯ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ೨೦೧೮ರಲ್ಲಿ ಮೈಸೂರಿನಲ್ಲಿ ನಡೆದ ದಸರಾ ಕವಿಗೋಷ್ಠಿ, ಬಾನುಲಿ ಹಾಗೂ ದೂರದರ್ಶನದ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ.

ಪತ್ರಿಕೋದ್ಯಮದಲ್ಲಿ ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆಯ 'ಚುಕ್ಕಿ ಚೈತ್ರ'ದ ಸಂಪಾದಕರಾಗಿ, 'ಭುಗಿಲು' ಎಂಬ ತುಮಕೂರಿನ ಸ್ಥಳೀಯ ವಾರಪತ್ರಿಕೆಯ ಅಂಕಣಕಾರರಾಗಿ, ಕರ್ನಾಟಕ ಅಂಧರ ವಿಮೋಚನ ವೇದಿಕೆಯ 'ಅಂತರಾಕ್ಷಿ' ಎಂಬ ರಾಜ್ಯದ ಅಂಗವಿಕಲರ ಏಕೈಕ ಪ್ರಾತಿನಿಧಿಕ ಮಾಸಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ.

ದೂರದರ್ಶನ ಚಂದನ, ಸುವರ್ಣ, ಸುದ್ದಿ ಟಿ.ವಿ., ಆಕಾಶವಾಣಿಗಳಲ್ಲಿ ಸ್ವತಃ ಸಂದರ್ಶಕರಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದಾರೆ.